**APRIL 1,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ರಾಷ್ಟ್ರೀಯ ಶಿಕ್ಷಣ ನೀತಿಯು, 2047 ರ ವಿಕಸಿತ ಭಾರತದ ಸಂಕಲ್ಪಕ್ಕೆ, ಅಡಿಪಾಯ ಹಾಕುವ ನೀತಿಯಾಗಿದೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದರು. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ ಯಿಂದ ಪ್ರಾದೇಶಿಕ ಭಾ ೆಗಳ ಪ್ರಚಾರ ಹಾಗೂ ಪ್ರಸಾರಕ್ಕೆ ಯಾವುದೇ ತೊಂದರೆಯಿಲ್ಲ. ಎನ್.ಇ.ಪಿ ಸಮರ್ಪಕ ಅನುಷ್ಠಾನದಿಂದ ವಿಕಸಿತ ಭಾರತ ಸಾಧ್ಯವಾಗಲಿದೆ ಎಂದರು.**

<><><>

**ಬೈಟ್: ಪ್ರಮೋದ್ ಸಾವಂತ್ 34 ಸೆಕೆಂದುಗಳು**

<><><>

**ಭಾರತೀಯ ಸೈನ್ಯದ ವೀರ ಸೇನಾಧಿಕಾರಿ, ಜನರಲ್ ತಿಮ್ಮಯ್ಯ ಅವರ 119 ನೇ ಜನ್ಮ ದಿನಾಚರಣೆಯನ್ನು, ಮಡಿಕೇರಿಯಲ್ಲಿ ಅರ್ಥ ಪೂರ್ಣವಾಗಿ ಆಚರಿಸಲಾಯಿತು. ಜನರಲ್ ತಿಮ್ಮಯ್ಯ ಅವರ ನಿವಾಸ ಸನ್ನಿಸೈಡ್‌ನಲ್ಲಿ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಕೊಡವ ಸಾಹಿತ್ಯ ಮತ್ತು ಸಂಸ್ಕೃತಿ ಅಕಾದೆಮಿ ಅಧ್ಯಕ್ಷ, ಮಹೇಶ್ ನಾಚಯ್ಯ ಗೌರವ ಅರ್ಪಿಸಿದರು. ಮಡಿಕೇರಿಯಲ್ಲಿರುವ, ಜನರಲ್ ತಿಮ್ಮಯ್ಯ ಪ್ರತಿಮೆಗೆ, ಕೊಡವ ಸಮಾಜದ ವತಿಯಿಂದ, ಗಣ್ಯರು ಗೌರವ ನಮನ ಸಲ್ಲಿಸಿದರು.**

<><><>

**ಇಂದು, ತ್ರಿವಿಧ ದಾಸೋಹಿ ತುಮಕೂರಿನ ಲಿಂಗೈಕ್ಯ ಶ್ರೀ ಶಿವಕುಮಾರ ಮಹಾಯೋಗಿಗಳ, 118 ನೇ ಜಯಂತಿ. ಸಂತ, ಶಿವಯೋಗಿಗಳ ಜಯಂತಿಯಂದು, ತಮ್ಮ ನಮನಗಳನ್ನು ಸಲ್ಲಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಧಾರ್ಮಿಕ ಪ್ರವಚನಗಳಿಗ ಷ್ಟೇ ಸೀಮಿತವಾಗದೆ ಸಾಮಾಜಿಕ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದ, ಶಿವಕುಮಾರ ಸ್ವಾಮೀಜಿಯವರ ನಿಸ್ವಾರ್ಥ ಸೇವೆ, ದುರ್ಬಲರ ಬಗೆಗಿನ ಮಮಕಾರ ಸರ್ವಕಾಲಕ್ಕೂ ಆದರಣೀಯ ಎಂದಿದ್ದಾರೆ.**

<><><>

ತುಮಕೂರು ಸಿದ್ಧಗಂಗಾ ಮಠದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು, ಇಂದು ಬೆಳಿಗ್ಗೆ ನಿಂದಲೇ ಆರಂಭಗೊಂಡಿವೆ. ಸಭಾ ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್, ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಪಾಲ್ಗೊಂಡಿದ್ದು, ಕಾರ್ಯಕ್ರಮ ಪ್ರಗತಿಯಲ್ಲಿದೆ.

<><><>

ಧಾರವಾಡ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ, ಬಸು ಬೇವಿನಗಿಡದ ಹಾಗೂ ವಿಜಯಪುರದ ವಿಶ್ರಾಂತ ಪ್ರಾಚಾರ್ಯ, ಅರವಿಂದ ಶರಣಪ್ಪ ಕಂಚ್ಯಾಣಿ ಅವರಿಗೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಇಂದು, 'ಶಿಕ್ಷಣವೇತ್ತರು' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಿದೆ. ಪ್ರೊಫೆಸರ್ ಎಸ್.ಎಸ್. ದೇಸಾಯಿ ದತ್ತಿ ಅಂಗವಾಗಿ, ಇಂದು ಸಂಜೆ 6 ಗಂಟೆಗೆ, ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾ ಭವನದಲ್ಲಿ ಕಾರ್ಯಕ್ರಮ ಜರುಗಲಿದೆ.

<><><>

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ), ಶಿವಮೊಗ್ಗದಲ್ಲಿ 25 ವರ್ಷದೊಳಗಿನ, ಮಹಿಳೆಯರ ರಾಜ್ಯ ಮಟ್ಟದ ಅಂತರ ಗ್ರಾಮೀಣ ವಲಯ ಕ್ರಿಕೆಟ್ ಟೂರ್ನಿಯನ್ನು ಆಯೋಜಿಸುತ್ತಿದೆ. ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿರುವ, ಧಾರವಾಡ ವಲಯ, ಮಹಿಳಾ ತಂಡದ ಆಯ್ಕೆ ಪ್ರಕ್ರಿಯೆಯು 7 ನೇ ತಾರೀಖಿನಂದು ಹುಬ್ಬಳ್ಳಿಯಲ್ಲಿ ನಡೆಯಲಿದೆ. 14 ರಿಂದ 24 ವರ್ಷದೊಳಗಿನ, ಧಾರವಾಡದ ಬಾಲಕಿಯರಿಗೆ ನಗರದ ಕ್ರಿಕೆಟ್ ಕ್ಲಬ್ ಆಫ್ ಕರ್ನಾಟಕದಲ್ಲಿ, ನಾಳೆಯಿಂದ ಉಚಿತ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುವುದು ಎಂದು ಸಿಸಿಕೆ ಗೌರವ ಕಾರ್ಯದರ್ಶಿ ವಸಂತ ಮುರ್ಡೇಶ್ವರ ತಿಳಿಸಿದ್ದಾರೆ.

<><><>

ಪಾರಂಪರಿಕ ನಗರಿ, ಪ್ರವಾಸಿ ತಾಣ, ಮೈಸೂರು ಮಹಾನಗರದ ಅಂದ ಮತ್ತು ಹಸಿರು ಹೊದಿಕೆ ಹೆಚ್ಚಿಸಲು, ಪಾಲಿಕೆ ಸಿದ್ಧವಾಗಿದೆ. 15ನೇ ಹಣಕಾಸು ಆಯೋಗದ ಶಿಫಾರಸಿನಂತೆ, 4 ಕೋಟಿ ರೂಪಾಯಿ ವೆಚ್ಚದಲ್ಲಿ, ನಗರದ ಎರಡೂ ರಸ್ತೆಯ ಮಧ್ಯದಲ್ಲಿ, 47 ಕಿಲೋ ಮೀಟರ್ ವರೆಗೆ, ಸಸಿಗಳನ್ನು ಹಾಗೂ ಅಲಂಕಾರಿಕ ಗಿಡಗಳನ್ನು ನೆಟ್ಟು, ಪೋಷಿಸಲು ಯೋಜಿಸಲಾಗಿದೆ. ಎಮಿಲಿಯಾ, ಬೋಗನ್ ವಿಲ್ಲಾ, ಪ್ಲೊಮೇರಿಯಾ ಪುಡಿಕ್, ರಾಯಲ್ ಪಾಮ್, ನಂದಿ ಬಟ್ಟಲು, ಕಣಗಲೆ ಹೂವುಗಳ ಗಿಡಗಳನ್ನು ನೆಡಲಾಗುತ್ತಿದೆ.

<><><>

ಮಂಡ್ಯ ಜಿಲ್ಲೆ, ಐತಿಹಾಸಿಕ ಹಾಗೂ ಧಾರ್ಮಿಕ ಕ್ಷೇತ್ರ ಮೇಲುಕೋಟೆಯ ಶ್ರೀ ಚಲುವನಾರಾಯಣಸ್ವಾಮಿಯ ಪ್ರಥಮ ತೆಪ್ಪೋತ್ಸವ ಸಂಭ್ರಮದಿಂದ ನೆರವೇರಿತು. ಏಪ್ರಿಲ್ 7 ರಂದು ಜರುಗಲಿರುವ ವಿಶ್ವಾವಸು ಸಂವತ್ಸರದ ವೈರಮುಡಿ ಬ್ರಹ್ಮೋತ್ಸವಕ್ಕೆ ಪೂರ್ವಭಾವಿಯಾಗಿ ಕಲ್ಯಾಣಿಯಲ್ಲಿ ನಡೆದ ಜಲವಿಹಾರದ ವೈಭವವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

<><><>

ಬಾಗಲಕೋಟೆ ಜಮಖಂಡಿಯ, ಗಿರೀಶ್ ನಗರದ ಎ.ಪಿ.ಎಂ.ಸಿ ಯಾರ್ಡ್ ನಲ್ಲಿ ನೂತನವಾಗಿ ನಿರ್ಮಾಣಗೊಂಡ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕ್ ಲಿಮಿಟೆಡ್ ಸಂಸ್ಥೆಯ, ಪ್ರಧಾನ ಕಚೇರಿ ಉದ್ಘಾಟನೆಯು, ನಾಳೆ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಹೊಸ ಕಟ್ಟಡವನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

<><><>

**ಏಪ್ರಿಲ್ 8, 9 ರಂದು ನಿಗದಿಯಾಗಿದ್ದ, ಚಿಕ್ಕಬಳ್ಳಾಪುರ ಜಿಲ್ಲಾ 10ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು, ಏಪ್ರಿಲ್ 23, 24ಕ್ಕೆ ಮುಂದೂಡಿದ್ದಾಗಿ, ಪ್ರಕಟಣೆ ತಿಳಿಸಿದೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>